**ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ (IFA)**

**ಕ್ವೀಯರ್ ಆರ್ಕೈವ್ ಫಾರ್ ಮೆಮೊರಿ, ರಿಫ್ಲೆಕ್ಷನ್ ಮತ್ತು ಆಕ್ಟಿವಿಸಂ (QAMRA)**

**ಸಹಯೋಗದೊಂದಿಗೆ NLSIU ಬೆಂಗಳೂರಿನಲ್ಲಿ**

**ಪತ್ರಾಗಾರ ಯೋಜನೆಗಾಗಿ ಅರ್ಜಿಗಳನ್ನು ಆಹ್ವಾನಿಸುತ್ತದೆ**

**ಪತ್ರಾಗಾರ ಮತ್ತು ವಸ್ತುಸಂಗ್ರಹಾಲಯಗಳು ಕಾರ್ಯಕ್ರಮದ ಅಡಿಯಲ್ಲಿ**

**IFA- QAMRA ಸೃಜನಾತ್ಮಕ ಯೋಜನೆ ಮತ್ತು IFA- QAMRA ಜ್ಞಾನಾತ್ಮಕ ಯೋಜನೆಗಾಗಿ**

**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ :** Wednesday 04, January 2023

ಇಂಗ್ಲಿಷಿನಲ್ಲಿ ಓದಲು ಇಲ್ಲಿ ಕ್ಲಿಕ್ ಮಾಡಿ.

ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ (IFA) ಸಂಸ್ಥೆಯು ಬೆಂಗಳೂರಿನಲ್ಲಿರುವ ಕ್ವೀಯರ್ ಆರ್ಕೈವ್ ಫಾರ್ ಮೆಮೊರಿ, ರಿಫ್ಲೆಕ್ಷನ್ ಮತ್ತು ಆಕ್ಟಿವಿಸಂ (QAMRA) NLSIU ಆರ್ಕೈವಲ್ ಪ್ರಾಜೆಕ್ಟಿನ ಸಹಯೋಗದೊಂದಿಗೆ IFA-QAMRA ಸೃಜನಾತ್ಮಕ ಯೋಜನೆ ಮತ್ತು IFA-QAMRA ಜ್ಞಾನಾತ್ಮಕ ಯೋಜನೆಗಳಿಗಾಗಿ ಅದರ ಪತ್ರಾಗಾರ ಮತ್ತು ವಸ್ತುಸಂಗ್ರಹಾಲಯಗಳು ಕಾರ್ಯಕ್ರಮದ ಅಡಿಯಲ್ಲಿ ಅರ್ಜಿಗಳನ್ನು ಆಹ್ವಾನಿಸುತ್ತದೆ. ಇದನ್ನು IFA ಕಾರ್ಯಗತಗೊಳಿಸುತ್ತದೆ.

IFA ದ ಪತ್ರಾಗಾರ ಮತ್ತು ವಸ್ತುಸಂಗ್ರಹಾಲಯಗಳ ಕಾರ್ಯಕ್ರಮವನ್ನು ಎರಡು ಆಯಾಮಗಳ ಉದ್ದೇಶದಿಂದ ಪ್ರಾರಂಭಿಸಲಾಗಿದೆ: ಪತ್ರಾಗಾರ ಮತ್ತು ವಸ್ತುಸಂಗ್ರಹಾಲಯಗಳ ಸಂಗ್ರಹಣೆಗಳೊಂದಿಗೆ ಕಲಾ ಅಭ್ಯಾಸಕಾರರು ಮತ್ತು ಸಂಶೋಧಕರು ಹೆಚ್ಚು ಸಾರ್ವಜನಿಕವಾಗಿ ತಮ್ಮನ್ನು ತೊಡಗಿಸಿಕೊಳ್ಳಲು ಅನುವಾಗುವಂತೆ ನೂತನ, ವಿಮರ್ಶಾತ್ಮಕ ಮತ್ತು ಸೃಜನಶೀಲ ವಿಧಾನಗಳನ್ನು ಸೃಷ್ಟಿಸುವುದು ಮತ್ತು ಈ ಸ್ಥಳಗಳನ್ನು ಸಂವಾದ ಸಾಧ್ಯತೆಯಿರುವ ಪರಿಪೂರ್ಣ ವೇದಿಕೆಗಳನ್ನಾಗಿಸಲು ಅವಕಾಶಗಳನ್ನು ಒದಗಿಸುವುದು. ಹೆಚ್ಚಿನ ಮಾಹಿತಿಗಾಗಿ, ಇಲ್ಲಿ ಕ್ಲಿಕ್ ಮಾಡಿ.

**NLSIU ನಲ್ಲಿ QAMRA ದಾಖಲೀಕರಣದ ಯೋಜನೆ ಕುರಿತು:**

ನ್ಯಾಶನಲ್ ಲಾ ಸ್ಕೂಲ್ ಆಫ್ ಇಂಡಿಯಾ ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿ ಸ್ಥಾಪಿಸಲಾಗಿರುವ ಬಹುಮಾಧ್ಯಮ ದಾಖಲೀಕರಣದ ಯೋಜನೆ ಅಡಿಯಲ್ಲಿ, QAMRAವು ಭಾರತದಲ್ಲಿ ಲಿಂಗ ಮತ್ತು ಲೈಂಗಿಕತೆಯ ಆಧಾರದ ಮೇಲೆ ಅಂಚಿನಲ್ಲಿರುವ ಸಮುದಾಯಗಳ ಕಥೆಗಳನ್ನು ವಿವರಿಸುತ್ತದೆ ಮತ್ತು ಸಂರಕ್ಷಿಸುತ್ತದೆ. ಅವರ ಕಾರ್ಯಗಳ ಬಗ್ಗೆ ಹೆಚ್ಚು ತಿಳಿಯಲು ಇಲ್ಲಿ ಕ್ಲಿಕ್ ಮಾಡಿ.

**NLSIU ಬೆಂಗಳೂರಿನಲ್ಲಿ QAMRA ದಾಖಲೀಕರಣದ ಯೋಜನೆಯ ಸಂಗ್ರಹಣೆಗಳ ಬಗ್ಗೆ:**

NLSIU ಬೆಂಗಳೂರಿನಲ್ಲಿರುವ QAMRA ಪತ್ರಾಗಾರ ಯೋಜನೆಯಲ್ಲಿನ ಸಂಗ್ರಹಣೆಗಳು ಬಿಡಿಯಾದ ಸಂಗ್ರಹಗಳಿಂದ ರಚಿತವಾಗಿಲ್ಲ. ಬದಲಾಗಿ ಈ ಕ್ವೇಯರ್ ಚಳುವಳಿಯನ್ನು ರೂಪಿಸಿದ ಅನೇಕ ಜನರ ಮೂಲಕ ಪರಸ್ಪರ ಸಂಪರ್ಕ ಹೊಂದಿದೆ. ಇದು ದಾಖಲಾತ್ಮಕ ಪುರಾವೆಗಳನ್ನು ತೆರೆಯುತ್ತದೆ ಮತ್ತು ವಿವಿಧ ಸಮೂಹಗಳು ಮತ್ತು ಸಂಸ್ಥೆಗಳಲ್ಲಿ ತೊಡಗಿಸಿಕೊಂಡಿರುವ ವಿವಿಧ ಜನರ ನೆನಪುಗಳನ್ನು ಒಳಗೊಂಡಿದೆ. ಸೃಜನಾತ್ಮಕ ಮತ್ತು ಜ್ಞಾನಾತ್ಮಕ ಯೋಜನೆಗಳಿಗಾಗಿ, QAMRA ಈ ಕೆಳಗಿನ ಸಂಗ್ರಹಣೆಗಳನ್ನು ತೆರೆಯುತ್ತದೆ:

• **ಮಾಯಾ ಶರ್ಮಾ ಮತ್ತು ಇಂದ್ರ ಪಾಥಕ್ ಸಂಗ್ರಹ**: ಮಾಯಾ ಶರ್ಮಾ ಮತ್ತು ಇಂದ್ರ ಪಾಥಕ್ ಗುಜರಾತ್‌ನ ವಡೋದರಾ ಮೂಲದ ಕ್ವೇಯರ್, ಸ್ತ್ರೀವಾದಿಗಳು ಹಾಗೂ ತಳಮಟ್ಟದ ಕಾರ್ಯಕರ್ತರು. ಈ ಸಂಗ್ರಹಣೆಯು ಗುಜರಾತಿನ ಕ್ವೇಯರ್ ಸಮುದಾಯಗಳೊಂದಿಗಿನ ಅವರ ಕೆಲಸವನ್ನು ಪ್ರತಿನಿಧಿಸುತ್ತದೆ ಮತ್ತು ವಿಕಲ್ಪ್ ಮತ್ತು ಪರ್ಮಾ/ಸಬ್ರಂಗ್ ಸಂಸ್ಥೆಗಳೊಂದಿಗಿನ ಅವರ ಕೆಲವು ಸಾಂಸ್ಥಿಕ ಕೆಲಸವನ್ನು ಪ್ರತಿನಿಧಿಸುತ್ತದೆ. ಹೆಚ್ಚಿನ ಮಾಹಿತಿಗಾಗಿ ಇಲ್ಲಿ ಕ್ಲಿಕ್ ಮಾಡಿ.

**ಸಂಗಮ ಸಂಗ್ರಹ:** ಸಂಗಮ ಸಂಸ್ಥೆಯು ಕಾರ್ಮಿಕ ವರ್ಗದ ಕ್ವೇಯರ್ ಸಮುದಾಯಗಳ, ಲೈಂಗಿಕ ಕೆಲಸಗಾರರ ಮತ್ತು HIV/AIDS (PLHA) ನೊಂದಿಗೆ ಬದುಕುತ್ತಿರುವ ಜನರ ಹಕ್ಕುಗಳನ್ನು ರಕ್ಷಿಸಲು ಮೀಸಲಾದ ಸಂಸ್ಥೆಯಾಗಿದೆ. ಈ ಸಂಗ್ರಹವು ಸಂಗಮ ಮತ್ತು ಅದರ ಅಧೀನ CBO ಗಳ ಕಾರ್ಯನಿರ್ವಹಣೆಯ ವಿಶಾಲ ನೋಟವನ್ನು ನೀಡುತ್ತದೆ ಮತ್ತು ಬೆಂಗಳೂರಿನಲ್ಲಿ ಈ ಚಳುವಳಿಯು ನಡೆದು ಬಂದ ಸಂದರ್ಭವನ್ನು ವಿವರಿಸುತ್ತದೆ. ಹೆಚ್ಚಿನ ಮಾಹಿತಿಗಾಗಿ ಇಲ್ಲಿ ಕ್ಲಿಕ್ ಮಾಡಿ.

**ವಿಭಾಗ 377 IPC ಸಂಗ್ರಹಣೆ:** ಈ ಸಂಗ್ರಹವು IPC ಯ ವಿಭಾಗ 377 ರ ನಿರಪರಾಧೀಕರಣದ ಬಗೆಗಿನ ದಾವೆ ಪ್ರಕ್ರಿಯೆಯ ವಿವಿಧ ಆಯಾಮಗಳನ್ನು ತನ್ನ ವಿವಿಧ ಸಂಗ್ರಹಣೆಗಳ ಮೂಲಕ ಪ್ರಸ್ತುತಪಡಿಸುತ್ತದೆ. ಹೆಚ್ಚಿನ ಮಾಹಿತಿಗಾಗಿ ಇಲ್ಲಿ ಕ್ಲಿಕ್ ಮಾಡಿ.

• **ಟಿ ಜಯಶ್ರೀ ವೀಡಿಯೋ ಸಂಗ್ರಹ:** ಈ ಸಂಗ್ರಹದ ಸಂಗ್ರಹಣೆಗಳು ಅನೇಕ ಸಾರ್ವಜನಿಕ ಮತ್ತು ಖಾಸಗಿ ಸಭೆಗಳು, ಪ್ರತಿಭಟನೆಗಳು, ಸಮುದಾಯದ ಕಾರ್ಯಾಗಾರಗಳು, ಜಾಥಾಗಳು ಮತ್ತು ಕಾರ್ಯಕರ್ತರು, ವಕೀಲರು, ಅರ್ಜಿದಾರರು ಮತ್ತು ಕ್ವೇಯರ್ ಜನರೊಂದಿಗಿನ ಹಲವಾರು ಆಳವಾದ ಸಂದರ್ಶನಗಳ ತುಣುಕುಗಳನ್ನು ಒಳಗೊಂಡಿದೆ. ಹೆಚ್ಚಿನ ಮಾಹಿತಿಗಾಗಿ ಇಲ್ಲಿ ಕ್ಲಿಕ್ ಮಾಡಿ.

ಎಡಿಟ್ ಮಾಡದ ವೀಡಿಯೊ ತುಣುಕುಗಳು, ಛಾಯಾಚಿತ್ರಗಳು, ವಿವಿಧ ಭಾಷೆಗಳ ವೃತ್ತಪತ್ರಿಕೆ ತುಣುಕುಗಳು, ಕಾನೂನು ದಾಖಲೆಗಳು ಮತ್ತು ಟಿಪ್ಪಣಿಗಳು, ವೈಯಕ್ತಿಕ ಕಲಾಕೃತಿಗಳು ಮತ್ತು ಸ್ಮರಣಿಕೆಗಳು ಮುಂತಾದ ವೈವಿಧ್ಯಮಯ ಸಂಗ್ರಹಣೆಗಳನ್ನು ಒಳಗೊಂಡಿವೆ. ಸಂಗ್ರಹಣೆಗಳು ನಮಗೆ 1980 ರ ದಶಕದ ಅಂತ್ಯದಿಂದ 2000 ರ ದಶಕದ ಆರಂಭದವರೆಗಿನ ಕ್ವೇಯರ್ ಕಾಳಜಿಗಳ ಒಂದು ನೋಟವನ್ನು ನೀಡುತ್ತದೆ. ಸಮುದಾಯಗಳ ತಮ್ಮ ರಚನೆ, ಭಿನ್ನಾಭಿಪ್ರಾಯ, ಸೃಜನಶೀಲತೆ, ಸಂತೋಷ, ಕ್ರೋಧ, ಸೋಲು

ಮತ್ತು ವಿಜಯದ ಕ್ಷಣಗಳಲ್ಲಿನ ಚಿತ್ರಗಳನ್ನು ಇಲ್ಲಿ ಕಾಣಬಹುದು ಮತ್ತು ಇತಿಹಾಸ, ಸಂಸ್ಕೃತಿ, ಸಾಮಾಜಿಕ ಬದಲಾವಣೆ ಮತ್ತು ನ್ಯಾಯಾಂಗ ಸುಧಾರಣೆಯ ದೃಷ್ಟಿಗಳ ಮೂಲಕ ಭಾರತದಲ್ಲಿ ಕ್ವೇಯರ್ ಅರ್ಥವನ್ನು ನೀಡುತ್ತದೆ.

**IFA-QAMRA ಸೃಜನಾತ್ಮಕ ಮತ್ತು ಜ್ಞಾನಾತ್ಮಕ ಯೋಜನೆಗಳ ಬಗ್ಗೆ:**

ಸೃಜನಾತ್ಮಕ ಯೋಜನೆಯು ಬೆಂಗಳೂರಿನ NLSIU ನಲ್ಲಿ ಇರುವ ಆರ್ಕೈವ್‌ನೊಂದಿಗೆ ಕ್ಯುರೇಟೋರಿಯಲ್ ಮತ್ತು ಕಲಾತ್ಮಕ ತೊಡಗಿಸಿಕೊಳ್ಳುವಿಕೆಗಾಗಿ ಯೋಜನಾ ಸಂಯೋಜಕರಿಗೆ ಅವಕಾಶಗಳನ್ನು ನೀಡುತ್ತದೆ. ಸಂಗ್ರಹಗಳನ್ನು ನವೀನ ರೀತಿಯಲ್ಲಿ ಮರುರೂಪಿಸುವ ಮತ್ತು ಆನ್‌ಲೈನ್ ಮತ್ತು ಆಫ್‌ಲೈನ್‌ನಲ್ಲಿ ಮಾತುಕತೆಗಳು, ಕಾರ್ಯಾಗಾರಗಳು, ಪ್ರದರ್ಶನಗಳು ಇತ್ಯಾದಿ ಸಾರ್ವಜನಿಕ ಕಾರ್ಯಕ್ರಮಗಳ ಮೂಲಕ ಸಂಗ್ರಹಗಳನ್ನು ಪ್ರಸ್ತುತಪಡಿಸಲಾಗುತ್ತದೆ.

ಜ್ಞಾನಾತ್ಮಕ ಯೋಜನೆಗಾಗಿ, ಯೋಜನಾ ಸಂಯೋಜಕರು NLSIU ಬೆಂಗಳೂರಿನಲ್ಲಿರುವ QAMRA ನಲ್ಲಿ ಸಂಗ್ರಹಣೆಗಳನ್ನು ಸಂಶೋಧಿಸುತ್ತಾರೆ ಮತ್ತು ವಿಮರ್ಶಾತ್ಮಕವಾಗಿ ತೊಡಗಿಸಿಕೊಳ್ಳುತ್ತಾರೆ, ಆರ್ಕೈವ್‌ನೊಂದಿಗೆ ಮತ್ತಷ್ಟು ಸಾರ್ವಜನಿಕವಾಗಿ ತೊಡಗಿಸಿಕೊಳ್ಳಲು, ಮೊನೊಗ್ರಾಫ್, ಪ್ರಬಂಧಗಳು ಇತ್ಯಾದಿ ಫಲಿತಾಂಶಗಳೊಂದಿಗೆ ಮತ್ತು ಆನ್‌ಲೈನ್ ಮತ್ತು ಆಫ್‌ಲೈನ್ ಸಾರ್ವಜನಿಕ ಕಾರ್ಯಕ್ರಮಗಳ ಮೂಲಕ ತಮ್ಮ ಸಂಶೋಧನೆಯನ್ನು ಪ್ರಸ್ತುತಪಡಿಸುತ್ತಾರೆ.

**ಎರಡೂ ಯೋಜನೆಗಳನ್ನು ಒಂದು ವರ್ಷದ ಅವಧಿಗೆ ಕಲ್ಪಿಸಲಾಗಿದೆ.**

ಸೃಜನಾತ್ಮಕ ಮತ್ತು ಜ್ಞಾನಾತ್ಮಕ ಯೋಜನೆಗಳಲ್ಲಿ ಕೆಲಸ ಮಾಡುವ ಯೋಜನಾ ಸಂಯೋಜಕರು NLSIU ಬೆಂಗಳೂರಿನಲ್ಲಿರುವ QAMRA ನ ಭೌತಿಕ ಆರ್ಕೈವ್‌ಗಳಲ್ಲಿ ಸಂಗ್ರಹಣೆಗಳನ್ನು ನೋಡುವ, ಅಧ್ಯಯನ ಮಾಡುವ ಮತ್ತು ಸಂಶೋಧಿಸುವ ಅಗತ್ಯವಿದೆ. ಯೋಜನಾ ಸಂಯೋಜಕರು ಯೋಜನೆಯ ಅವಧಿಯಲ್ಲಿ ಮೇಲೆ ತಿಳಿಸಲಾದ ಅವಕಾಶಗಳನ್ನು ಪಡೆಯುತ್ತಾರೆ. ಸಂಶೋಧನೆಗಾಗಿ ಲಭ್ಯವಿರುವ ಸಂಗ್ರಹಣೆ ಮತ್ತು ಆರ್ಕೈವಲ್ ವಸ್ತುಗಳ ಕುರಿತು ಹೆಚ್ಚಿನ ಮಾಹಿತಿಗಾಗಿ, ದಯವಿಟ್ಟು qamraarchive@nls.ac.in ನಲ್ಲಿ ಸಹಾಯಕ ಆರ್ಕೈವಿಸ್ಟ್ ಸಿದ್ಧಾರ್ಥ್ ಎಸ್ ಗಣೇಶ್ ಅವರನ್ನು ಸಂಪರ್ಕಿಸಿ

IFA ಎರಡೂ ಯೋಜನೆಗಳನ್ನು ಕಾರ್ಯಗತಗೊಳಿಸುತ್ತದೆ ಎಂಬುದನ್ನು ದಯವಿಟ್ಟು ಗಮನಿಸಿ.

**ಅರ್ಜಿದಾರರ ವಿವರ:**

• ವಿಶಿಷ್ಟ ಲಿಂಗ ಮತ್ತು ಲೈಂಗಿಕ ಗುರುತಿನ ಅರ್ಜಿದಾರರು ಅರ್ಜಿ ಸಲ್ಲಿಸಲು ಪ್ರೋತ್ಸಾಹಿಸಲಾಗುತ್ತದೆ.

• ನಾವು ಮೇಲ್ವಿಚಾರಕರು, ಕಲಾವಿದರು, ಸಂಶೋಧಕರು, ಬರಹಗಾರರು, ಪ್ರದರ್ಶಕರು ಮತ್ತು ಇತರ ಸೃಜನಾತ್ಮಕ ಅಭ್ಯಾಸಕಾರರಿಂದ ಮತ್ತು ಸಂಶೋಧನೆಯ ಹಿನ್ನೆಲೆ ಹೊಂದಿರುವ ಮತ್ತು ಆರ್ಕೈವಲ್ ಮತ್ತು ವಸ್ತು ಸಂಗ್ರಹಾಲಯಗಳೊಂದಿಗೆ ಕೆಲಸ ಮಾಡಲು ತೀವ್ರ ಆಸಕ್ತಿ ಹೊಂದಿರುವವರಿಂದ ಅರ್ಜಿಗಳನ್ನು ನಿರೀಕ್ಷಿಸುತ್ತಿದ್ದೇವೆ.

• ಅಂತರಶಿಸ್ತೀಯ ಮತ್ತು ಸಹಯೋಗದ ವಿಧಾನಗಳ ಮೂಲಕ ಯೋಚಿಸುವ ಸಾಮರ್ಥ್ಯವನ್ನು ಪ್ರದರ್ಶಿಸುವ ಮತ್ತು ಫಲಿತಾಂಶಗಳನ್ನು ತೋರುವ ಅರ್ಜಿಗಳನ್ನು ಸಹ ನಾವು ಪ್ರೋತ್ಸಾಹಿಸುತ್ತೇವೆ.

• QAMRA ಬೆಂಗಳೂರಿನ ಮೂಲದ ಭೌತಿಕ ಆರ್ಕೈವ್ ಆಗಿರುವುದರಿಂದ, ಯೋಜನಾ ಸಂಯೋಜಕರು ತಮ್ಮ ಯೋಜನಾ ಅವಧಿಯಲ್ಲಿ ಆರ್ಕೈವ್‌ಗಳಲ್ಲಿ ಸಾಕಷ್ಟು ಸಮಯವನ್ನು ಕಳೆಯಬೇಕಾಗಿರುವುದರಿಂದ ಬೆಂಗಳೂರು ಮತ್ತು ಸುತ್ತಮುತ್ತಲಿನ ಅರ್ಜಿಗಳಿಗೆ ಆದ್ಯತೆ ನೀಡಲಾಗುವುದು.

• ಭಾರತೀಯ ಪ್ರಜೆಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರು. ನಮ್ಮ ಅರ್ಹತಾ ಮಾನದಂಡಗಳ ಕುರಿತು ಇನ್ನಷ್ಟು ತಿಳಿದುಕೊಳ್ಳಲು, ದಯವಿಟ್ಟು ಇಲ್ಲಿ ಕ್ಲಿಕ್ ಮಾಡಿ.

**ಅರ್ಜಿ ಸಲ್ಲಿಸಲು ಕೆಲವು ಮಾರ್ಗಸೂಚಿಗಳು:**

ನಿಮ್ಮ ಅಪ್ಲಿಕೇಶನ್ ಒಳಗೊಂಡಿರಬೇಕಾದ ಮಾಹಿತಿಗಳು:

• ಮೇಲೆ ತಿಳಿಸಲಾದ ದೃಶ್ಯ ಮತ್ತು ಲಿಖಿತ ಮಾಹಿತಿಗಳಿಂದ ಅಭಿವೃದ್ಧಿಪಡಿಸಬಹುದಾದ ಯೋಜನೆಯ (ಪ್ರದರ್ಶನ, ಅಥವಾ ಕಲ್ಪಿತ ಸೃಜನಶೀಲ ಫಲಿತಾಂಶಗಳ ರೂಪರೇಷೆಗಳು ಅಥವಾ ಇದು ಜ್ಞಾನಾತ್ಮಕ ಯೋಜನೆಯಾಗಿದ್ದಲ್ಲಿ ಸಂಶೋಧನೆಯ ಪ್ರಶ್ನೆಗಳು) ಸಂಕ್ಷಿಪ್ತ ವಿವರಣೆಯುಳ್ಳ ಪ್ರಸ್ತಾವನೆ. ವಿವರಣೆಯು ದೃಷ್ಟಿ, ವಿಧಾನ ಮತ್ತು ಸಂಭವನೀಯ ಫಲಿತಾಂಶಗಳನ್ನು ಒಳಗೊಂಡಿರಬೇಕು. ಆರ್ಕೈವ್‌ಗಳಲ್ಲಿನ ವಿವಿಧ ಸಂಗ್ರಹಣೆಗಳನ್ನು ವೈಶಿಷ್ಟ್ಯಪೂರ್ಣವಾಗಿ ಬಳಸಿಕೊಳ್ಳುವ ಪ್ರಸ್ತಾವನೆಗಳನ್ನು ಪ್ರೋತ್ಸಾಹಿಸಲಾಗುತ್ತದೆ.

• ಇಲ್ಲಿನ ಸಂಪನ್ಮೂಲಗಳಿಂದ ಅಭಿವೃದ್ಧಿಪಡಿಸಬಹುದಾದ ಇತರ ಸಾರ್ವಜನಿಕ ಕಾರ್ಯಕ್ರಮಗಳ ಕುರಿತು ಸಂಕ್ಷಿಪ್ತ ಟಿಪ್ಪಣಿ.

• ವಿವರವಾದ ಬಜೆಟ್.

• ಕ್ಯುರೇಟರ್, ಕಲಾ ಅಭ್ಯಾಸಿ ಅಥವಾ ಸಂಶೋಧಕರಾಗಿ ನೀವು ತೊಡಗಿಸಿಕೊಂಡಿರುವ ಯೋಜನೆಯ ಸಂಕ್ಷಿಪ್ತ ವಿವರಣೆಯೊಂದಿಗೆ ನಿಮ್ಮ ಪರಿಚಯ. ಈ ವಿವರಣೆಯು ಆ ಯೋಜನೆಯಿಂದ ಉಂಟಾದ ದೃಷ್ಟಿ, ವಿಧಾನ, ಪ್ರಕ್ರಿಯೆಗಳು ಮತ್ತು ಫಲಿತಾಂಶಗಳನ್ನು ಒಳಗೊಂಡಿರಬೇಕು. ದಯವಿಟ್ಟು ನಮಗೆ ಲಗತ್ತುಗಳ ಬದಲಾಗಿ ಲಿಂಕ್‌ಗಳನ್ನು ಕಳುಹಿಸಿ.

**ಯೋಜನೆಯ ಬಜೆಟ್:**

• ಯೋಜನೆಯ ವೆಚ್ಚವು 2,00,000/-ರೂ.ಗಳನ್ನು ಮೀರಬಾರದು.

• ನೀವು ಮಾಸಿಕ 12,000/-ರೂ ಗೌರವಧನಕ್ಕಾಗಿ ಬಜೆಟ್ ಮಾಡಬಹುದು. ಈ ಗೌರವಧನವು ಯೋಜನೆಯ ಸಂಪೂರ್ಣ ಅವಧಿಗೆ 1,44,000/- ರೂ ಮೀರಬಾರದು ಎಂಬುದನ್ನು ದಯವಿಟ್ಟು ಗಮನಿಸಿ.

• ನಮ್ಮ ನಿಧಿಗಳು ಯೋಜನೆ ಸಂಬಂಧಿತ ವೆಚ್ಚಗಳು ಮತ್ತು ಚಟುವಟಿಕೆಗಳಿಗೆ ವಿನಿಯೋಗಿಸಲಾಗುವ ವೆಚ್ಚಗಳನ್ನು ಮಾತ್ರ ಒಳಗೊಂಡಿರುತ್ತವೆ ಮತ್ತು ಮೂಲಸೌಕರ್ಯ ವೆಚ್ಚಗಳು ಅಥವಾ ಸಲಕರಣೆಗಳ ಖರೀದಿಗೆ ಪಾವತಿಸಲಾಗುವುದಿಲ್ಲ.

• ಪ್ರತಿಯೊಂದು ಬಜೆಟ್ ವರ್ಗವು ಯೋಜನಾ-ಸಂಬಂಧಿತ ವೆಚ್ಚದ ನಿರ್ದಿಷ್ಟ ಅಂಶಕ್ಕೆ ಸಂಬಂಧಿಸಿರುತ್ತದೆ ಎಂಬುದನ್ನು ದಯವಿಟ್ಟು ಖಚಿತಪಡಿಸಿಕೊಳ್ಳಿ.

**ಈ ಯೋಜನೆಯನ್ನು ನಿಮ್ಮೊಂದಿಗೆ ನೇರವಾಗಿ ಸಂಯೋಜಿಸುವ ಕಾರ್ಯವನ್ನು IFA ಕಾರ್ಯಗತಗೊಳಿಸುತ್ತದೆ ಎಂಬುದನ್ನು ದಯವಿಟ್ಟು ಗಮನಿಸಿ.**

**ಮುಖ್ಯ ದಿನಾಂಕಗಳು :**

1. ಅರ್ಜಿಗಳನ್ನು ಕಳುಹಿಸಲು ಕೊನೆಯ ದಿನಾಂಕ Wednesday 04, January 2023
2. ಕಿರುಪಟ್ಟಿಯಲ್ಲಿ ಇರುವ ಆಯ್ದ ಅಭ್ಯರ್ಥಿಗಳನ್ನು ಜನವರಿ 2023 ರಲ್ಲಿ ಸಂದರ್ಶನ ಮಾಡಲಾಗುತ್ತದೆ.
3. ಫೆಬ್ರವರಿ 2023 ರಲ್ಲಿ ಯೋಜನೆ ಕಾರ್ಯಗತಗೊಳ್ಳುತ್ತದೆ

ಈ ಕುರಿತು ಯಾವುದೇ ಪ್ರಶ್ನೆಗಳು ಹಾಗೂ ಅರ್ಜಿಗಳನ್ನು ಸಲ್ಲಿಸಲು ritwika@indiaifa.org ಈ ಮಿಂಚಂಚೆಗೆ 'NLSIU ಬೆಂಗಳೂರಿನಲ್ಲಿ IFA-QAMRA ಪತ್ರಾಗಾರ ಯೋಜನೆಗೆ ಅರ್ಜಿ' ಎಂಬ ವಿಷಯ ಸಾಲಿನೊಂದಿಗೆ ಕಳುಹಿಸಿ.